**ಹಿರಿಯ ಶ್ರೇಣಿ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.**

**CC No. 312/2023**

**PW-1 CW-1**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಪಾರ್ವತಿ ಅಲಿಯಾಸ ಅನ್ನಪೂರ್ಣ ಗಂಡ ದೇವರಾಜ |
| ವಯಸ್ಸು | ಃ | 29 ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಮಸೀದಾಪೂರ |
| ಪ್ರಮಾಣಿಕರಿಸಿದ ದಿನಾಂಕ | ಃ | 07-11-2024 |

---

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ಚಾಸಾ-2, 3 ಮತ್ತು 6 ರಿಂದ 9 ರವರ ಪರಿಚಯ ಇದೆ. ಚಾಸಾ-4 ಮತ್ತು 5 ರವರು ನನ್ನ ತಂದೆ-ತಾಯಿ. 1 ನೇ ಆರೋಪಿ ನನ್ನ ಗಂಡ. 2 ಮತ್ತು 3 ನೇ ಆರೋಪಿತರು ನನ್ನ ಮಾವ ಮತ್ತು ಅತ್ತೆ ಆಗಬೇಕು.

ನನ್ನ ಮತ್ತು 1 ನೇ ಆರೋಪಿಯ ಮದುವೆಯಾಗಿ ಈಗ ಅಂದಾಜು 08 ವರ್ಷ ಆಗಿರುತ್ತದೆ. ಎರಡು ಮಕ್ಕಳು ಆದ ನಂತರ ಒಂದು ವರ್ಷದ ವರೆಗೆ ಆರೋಪಿತರು ನನ್ನನ್ನು ಚೆನ್ನಾಗಿ ನೋಡಿಕೊಂಡಿರುತ್ತಾರೆ. ನಂತರ ನನ್ನ ಗಂಡ, ಅತ್ತೆ-ಮಾವ ಇವರು ನನಗೆ 5 ಲಕ್ಷ ವರದಕ್ಷಿಣೆ ತರುವಂತೆ ಕಿರುಕುಳ ನೀಡುತ್ತಿದ್ದರು ಹಾಗೂ ನನಗೆ ಹೊಡೆ-ಬಡೆ ಮಾಡುತ್ತಿದ್ದರು ಹಾಗೂ ನನ್ನನ್ನು ಕೊಂದು ತಿಪ್ಪೆಯಲ್ಲಿ ಮುಚ್ಚಿ ಹಾಕುತ್ತೇನೆ ಎಂದು ನನಗೆ ಪ್ರಾಣ ಬೆದರಿಕೆ ಸಹ ಹಾಕಿರುತ್ತಾರೆ. ಬಾಯಿಗೆ ಬಂದಂತೆ ಸೂಳೆ ಇತ್ಯಾದಿಯಾಗಿ ಅವಾಚ್ಯ ಶಬ್ದಗಳಿಂದ ಆರೋಪಿತರೆಲ್ಲರೂ ನನಗೆ ಬೈಯುತ್ತಿದ್ದರು. ಆರೋಪಿತರು ನನಗೆ ಅತೀಯಾದ ಕಿರುಕುಳ ನೀಡುತ್ತಿದ್ದರಿಂದ ಸದರಿ ವಿಷಯವನ್ನು ನಾನು ನನ್ನ ತಂದೆ-ತಾಯಿಗೆ ತಿಳಿಸಿದ್ದು ನನ್ನ ತಂದೆ-ತಾಯಿ ಬಂದು ನನ್ನನ್ನು ತವರು ಮನೆಗೆ ಕರೆದುಕೊಂಡು ಹೋಗಿರುತ್ತಾರೆ. ಈಗ ಅಂದಾಜು 3-4 ವರ್ಷಗಳ ಹಿಂದೆ ರಾತ್ರಿ 8-00 ಗಂಟೆಯ ಸುಮಾರಿಗೆ ಆರೋಪಿತರು 03 ಜನರು ನನ್ನ ತವರು ಮನೆಗೆ ಬಂದು ಹಣ ತರುವಂತೆ ಕಳುಹಿಸಿದ್ದು ತರದೇ ಇಲ್ಲೇ ಇದ್ದಿರುವಿ ಎಂದು ನನಗೆ ಆರೋಪಿತರು ಹೊಡೆದಿರುತ್ತಾರೆ. ಆಗ ನನ್ನ ತಂದೆ-ತಾಯಿ ಬಿಡಿಸಲು ಬಂದಿದ್ದು ಅವರೂ ನಮ್ಮ ತಂದೆ-ತಾಯಿಗೂ ಸಹ ಆರೋಪಿತರು ಹೊಡೆದಿರುತ್ತಾರೆ ಹಾಗೂ ನಮ್ಮ ಮನೆಯ ಪಕ್ಕದವರಾದ ಚಾಸಾ-2, 3, 7 ಮತ್ತು 8 ರವರು ಬಂದು ಜಗಳ ಬಿಡಿಸಿರುತ್ತಾರೆ. ನಂತರ ಮರುದಿವಸ ಗಬ್ಬೂರು ಪೊಲೀಸ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸದರಿ ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಂತರ ದೂರು ನೀಡಿದ 4-5 ದಿನಗಳ ನಂತರ ಪೊಲೀಸರು ನಮ್ಮ ಮನೆಗೆ ಬಂದು ಸ್ಥಳದಲ್ಲಿ ಪೊಟೋ ತೆಗೆದುಕೊಂಡು ಹೋಗಿರುತ್ತಾರೆ. ಸದರಿ ಪೊಟೋವನ್ನು ಸಾಕ್ಷಿ

ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ನನ್ನ ಮತ್ತು ನನ್ನ ಮಕ್ಕಳ ಮೈಮೇಲಿನ ಒಡವೆಗಳನ್ನು ಮಾರಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಆರ್.ಕೆ ವಕೀಲರಿಂದ.**

ನನ್ನ ಮೊದಲನೇ ಮಗನಿಗೆ ಈಗ 08 ವರ್ಷ ವಯಸ್ಸು ಇರುತ್ತದೆ ಹಾಗೂ 2 ನೇಯ ಮಗಳಿಗೆ 05 ವರ್ಷ ವಯಸ್ಸು ಆಗಿರುತ್ತದೆ. ನನ್ನ ಮತ್ತು ಆರೋಪಿತರ ನಡುವಿನ ಸಂಬಂಧ ಹೊಸ ಸಂಬಂಧ ಆಗಿರುತ್ತದೆ. 2 ನೇ ಮಗು ಆಗುವವರೆಗೆ ನಾನು ಗಂಡನ ಮನೆಯಲ್ಲಿದ್ದೆ. ಗಂಡನ ಮನೆಯಲ್ಲಿ ನಾನು, ನನ್ನ ಗಂಡ, ಅತ್ತೆ ಹಾಗೂ ಮಾವ ಇರುತ್ತೇವೆ. ನನ್ನ ಮಾವನಿಗೆ 04 ಜನ ಹೆಣ್ಣು ಮಕ್ಕಳು ಇರುತ್ತಾರೆ. ನಾವು ಮನೆಯಲ್ಲಿ 04 ಜನ ಮಾತ್ರ ಇದ್ದು ಸದರಿ ಹೆಣ್ಣು ಮಕ್ಕಳ ಮದುವೆಯಾಗಿ ಅವರ ಗಂಡನ ಮನೆಯಲ್ಲಿ ಇರುತ್ತಾರೆ. ಮದುವೆಯ ಸಂದರ್ಭದಲ್ಲಿ 6 ತೊಲೆ ಬಂಗಾರ ಹಾಗೂ 5 ಲಕ್ಷ ರೂ. ಹಾಗೂ 70 ಸಾವಿರ ರೂ. ಸಂಸಾರಿಕ ಸಾಮಗ್ರಿಗಳನ್ನು ಆರೋಪಿತರಿಗೆ ನನ್ನ ಪೋಷಕರು ನೀಡಿರುತ್ತಾರೆ. ನನ್ನ ದೂರಿನಲ್ಲಿ ಸದರಿ ಅಂಶವನ್ನು ನಮೂದಿಸಿರುತ್ತೇನೆ. ನಾನು ಠಾಣೆಗೆ ಮೌಖಿಕ ದೂರನ್ನು ನೀಡಿರುತ್ತೇನೆ. ಸದರಿ ದೂರು ನೀಡುವಾಗ ಮರುದಿನ ರಾತ್ರಿ 8-00 ಗಂಟೆ ಸಮಯ ಆಗಿತ್ತು. ಸದರಿ ದೂರು ನೀಡಲು ನಾನು ಮತ್ತು ನನ್ನ ತಂದೆ-ತಾಯಿ ಹೋಗಿದ್ದೆವು. ಸದರಿ ಘಟನೆ ನಡೆದ ದಿನ ನಾನು ಮತ್ತು ನನ್ನ ತಂದೆ-ತಾಯಿ ಮಸಿದಪೂರ ಗ್ರಾಮದಲ್ಲಿ ಇದ್ದೆವು. ಸದರಿ ಘಟನೆ ರಾತ್ರಿ 8-00 ಗಂಟೆ ಸುಮಾರಿಗೆ ಆಗಿರುತ್ತದೆ. ಸದರಿ ದೂರು ನೀಡಲು ಒಂದು ದಿನ ವಿಳಂಬವಾಗಿರುವುದಕ್ಕೆ ಏನು ಕಾರಣ ಎಂಬ ಪ್ರಶ್ನೆಗೆ ಸಾಕ್ಷಿಯು ಘಟನೆ ರಾತ್ರಿ ಆಗಿದ್ದರಿಂದ ಮರುದಿನವೇ ರಾತ್ರಿ 8-00 ಕ್ಕೆ ದೂರು ನೀಡಿದ್ದು ವಿಳಂಬ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ರಾತ್ರಿ ಘಟನೆಯಾದ ನಂತರ ಮರುದಿನ ಬೆಳಿಗ್ಗೆ ಠಾಣೆಗೆ ಹೋಗಿದ್ದು ಠಾಣೆಯಲ್ಲಿ ಸಾಹೇಬರು ಬೇರೆಡೆಗೆ ಹೋಗಿದ್ದರಿಂದ ಪ್ರಕರಣ ರಾತ್ರಿ ದಾಖಲಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ವಿಳಂಬಕ್ಕೆ ಕಾರಣವನ್ನು ನನ್ನ ದೂರಿನಲ್ಲಿ ನಮೂದಿಸಿರುವುದಿಲ್ಲ. ಘಟನೆಯಲ್ಲಿ ಹಣೆಗೆ ರಕ್ತಗಾಯವಾಗಿದ್ದು ಬೆನ್ನಿಗೆ ಮೂಕಪೆಟ್ಟಾಗಿರುತ್ತದೆ ಹಾಗೂ ನನ್ನ ಕೂದಲು ಹಿಡಿದು ಎಳೆದಾಡಿರುತ್ತಾರೆ. ಸದರಿ ಗಾಯಕ್ಕೆ ವೈದ್ಯರ ಬಳಿ ಚಿಕಿತ್ಸೆ ಪಡೆದಿರುತ್ತೇನೆ. ಗಬ್ಬೂರಿನ ರಾಜಾವಳಿ ವೈದ್ಯರ ಬಳಿ ಚಿಕಿತ್ಸೆ ಪಡೆದಿರುತ್ತೇನೆ. ಪೊಲೀಸರೇ ವೈದ್ಯರ ಬಳಿಗೆ ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ. ಗಬ್ಬೂರು ಗ್ರಾಮದಲ್ಲಿ ಸರಕಾರಿ ಆಸ್ಪತ್ರೆ ಇದೆ ಎಂದರೆ ಸರಿ. ಸದರಿ ನನ್ನ ತಂದೆ-ತಾಯಿಗೆ ಘಟನೆಯಲ್ಲಿ ಪೆಟ್ಟಾಗಿರುತ್ತದೆ. ನನ್ನ ತಂದೆಗೆ ಬೆನ್ನಿಗೆ ಮತ್ತು ಮೊಳಕಾಲಿಗೆ ಬಡಿಗೆಯಿಂದ ಹೊಡೆದು ಪೆಟ್ಟು ಮಾಡಿರುತ್ತಾರೆ. ಸದರಿ ನನ್ನ ತಂದೆಗೆ ರಕ್ತಗಾಯ ಆಗಿರುವುದಿಲ್ಲ ಮೂಕ ಪೆಟ್ಟಾಗಿರುತ್ತದೆ. ನನ್ನ ತಾಯಿಗೆ ಕೂದಲು ಹಿಡಿದು ಎಳೆದಾಡಿರುತ್ತಾರೆ. ನನ್ನ ತಾಯಿಗೆ ತಲೆಗೆ, ಕೈಗೆ, ಬೆನ್ನಿಗೆ ಹೊಡೆದಿರುತ್ತಾರೆ. ನನ್ನ ತಾಯಿಗೆ ಮೂಕ ಪೆಟ್ಟಾಗಿರುತ್ತದೆ ರಕ್ತಗಾಯ ಆಗಿರುವುದಿಲ್ಲ. ನನ್ನ ತಾಯಿಯ ಸೀರೆ ಹಿಡಿದು ಎಳೆದಾಡಿರುತ್ತಾರೆ. ಸದರಿ ನನ್ನ ತಂದೆ-ತಾಯಿಗೂ ಸಹ ಪೊಲೀಸರು ಚಿಕಿತ್ಸೆ ಕೊಡಿಸಿರುತ್ತಾರೆ. ಸರಕಾರಿ ಆಸ್ಪತ್ರೆ ದೂರ ಇರುವುದರಿಂದ ಪಕ್ಕದಲ್ಲಿರುವ ರಾಜಾವಳಿ ವೈದ್ಯರಿಗೆ ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ.

ನಾನು ಈಗ ತವರು ಮನೆಗೆ ಹೋಗಿ 04 ವರ್ಷ ಆಗಿರುತ್ತದೆ. ಸದರಿ ನನ್ನ ಸಂಸಾರಿಕ ಜೀವನ ಸರಿಪಡಿಸಲು ಕಳೆದ 04 ವರ್ಷದಲ್ಲಿ ಯಾವುದೇ ಪ್ರಯತ್ನ ಆಗಿರುವುದಿಲ್ಲ.

ನನ್ನ ಅತ್ತೆ-ಮಾವ ಗ್ರಾಮದ ಹಿರಿಯರೊಂದಿಗೆ ನಮ್ಮ ಮನೆಗೆ ಬಂದು ಪಂಚಾಯತಿ ಮಾಡಿರುತ್ತಾರೆ ಎಂದರೆ ಸರಿ. ನನ್ನ ಅತ್ತೆ-ಮಾವ ನನ್ನನ್ನು ಗಂಡನ ಮನೆಗೆ ಕರೆದುಕೊಂಡು ಹೋಗಲು ಬಂದಿದ್ದರು ಎಂದರೆ ಸರಿಯಲ್ಲ. ಸದರಿ ಪಂಚಾಯತಿಯಲ್ಲಿ ನಾನು ಗಂಡನ ಮನೆಗೆ ಬರುವುದಿಲ್ಲ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಬೇರೆ ಮನೆ ಮಾಡುವಂತೆ ಒತ್ತಾಯ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಗಂಡ ಬೇರೆ ಮನೆ ಮಾಡುವುದು ಬೇಡ ನನ್ನ ತಂದೆ-ತಾಯಿಗೆ ವಯಸ್ಸಾಗಿದ್ದು ಅವರನ್ನು ನೋಡಿಕೊಳ್ಳುವ ಜವಬ್ದಾರಿ ನನ್ನ ಮೇಲಿದ್ದು ಅವರೊಂದಿಗೆ ಇರುವಂತೆ ಬುದ್ಧಿವಾದ ಹೇಳಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಗಂಡ ನನ್ನ ಕೋರಿಕೆಯಂತೆ ಬೇರೆ ಮನೆ ಮಾಡದೇ ಇದ್ದುದ್ದರಿಂದ ನಾನಾಗಿಯೇ ತವರು ಮನೆಗೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ವಯಸ್ಸಾದ ಅತ್ತೆ-ಮಾವರನ್ನು ನೋಡಿಕೊಳ್ಳಲು ನಾನು ಸಿದ್ದಳಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ದೂರನ್ನು ನೀಡಿದರೆ ಬೇರೆ ಮನೆ ಮಾಡುತ್ತಾನೆ ಎಂದು ಯಾವುದೇ ಘಟನೆ ಆಗದೇ ಇದ್ದರೂ ಈ ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. 5 ಲಕ್ಷ ರೂ. ವರದಕ್ಷಿಣೆ ತರುವಂತೆ ಕಿರುಕುಳ ನೀಡಿರುತ್ತಾನೆ, ಹೊಡೆ-ಬಡೆ ಮಾಡಿರುತ್ತಾರೆ, ಕೊಂದು ತಿಪ್ಪೆಯಲ್ಲಿ ಮುಚ್ಚಿ ಹಾಕುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ, ಅವಾಚ್ಯ ಶಬ್ದಬಳಿಂದೆ ಬೈದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ನನ್ನ ತಂದೆ-ತಾಯಿಗೆ ನಮ್ಮ ತವರು ಮನೆಯಲ್ಲಿರುವ ಮನೆಗೆ ಬಂದು ನಮಗೆ ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಚಾಸಾ-2 ಮತ್ತು 3 ರವರು ಪಕ್ಕದ ಮನೆಯವರು ಆಗಿರುತ್ತಾರೆ. ಸದರಿಯವರು ಜಗಳ ಬಿಡಿಸಿರುತ್ತಾರೆ. ಚಾಸಾ-2, 3, 7 ಮತ್ತು 8 ರವರು ಜಗಳ ಬಿಡಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನಾನು ದೂರು ನೀಡಿದ ನಂತರ ನನ್ನನ್ನು ಪುನಃ ಕರೆಸಿರುವುದಿಲ್ಲ. ಆರೋಪಿತರಿಗೆ ತೊಂದರೆ ಕೊಡಲು ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತುಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.